Sri VEERENDRA PATIL (Chief Minister).—

(*a*) The State Government have no information about the number of candidates who had appeared for these examinations from Mysore State. Recruitment to the IAS/IPS is made by the Government of India and the Union Public Service Commission on the results of Combined Competitve Examinations conducted by the Union Public Service Commission in accordance with IAS/IPS (Recruitment) Rules. There is no provision in the All India Services Rules for the State Government to make recommendations in this behalf to the Government of India and the Union Public Service Commission.

(*b*) Since recruitiment is made by the Government of India and Union Public Service Commission information is not available with Government.

(*c*) Since the recruitment is made by the Government of India and the Union Public Service Commission on the results of the Combined Competitive Examinations, there is no question of Social Welfare Department making any recommendations for selection of candidates to the IAS/IPS.

(*d*) No Sir; any such representation by the State Government will not be in order.

Participation of Candidates from Mysore State in I.A.S./I.P.S. Examination

858. Smt. NAGARATHNAMMA HIREMATH (Gandhinagar).—

Will the Chief Minister be pleased to state.—

(*a*) the number of candidates from Mysore State who had appeared for the I.A.S/I.P.S. examination conducted by the Union Public Service Commission; since 1964;

(*b*) out of them the number of candidates who were successful in those examinations; and

(*c*) the action taken by the State Government to encourage participation of a large number of candidates from this State in these Examinations and to secure good results therein ?

Sri VEERENDRA PATIL (Chief Minister).—

(*a*) and (*b*) Since the Competitive Examinations are conducted by the Union Public Service Commission, no information is available with the State Government.

(*c*) The State Government do not propose to take such action.

ಶ್ರೀ ಎ. ಮುನಿಯಪ್ಪ.—ಅವಕಾಶ ಇಲ್ಲ ಎಂದು ಹೇಳಿದರೆ ಮೈಸೂರಿನ ಕಡೆಯಿಂದ ಯಾರೂ ಕುಳಿತುಕೊಳ್ಳಬಾರದು ಎಂದು ಮಾಡಿದ್ದೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಮೈಸೂರು ಸರಕಾರದವರಿಗೆ ಯಾವ ವಿಧವಾದ ಅವಕಾಶವೂ ಇಲ್ಲ. ಇದನ್ನು ಕೇಂದ್ರ ಸರಕಾರದ ಯು. ಪಿ. ಎಸ್. ಸಿ. ಕಮಿಷನ್‌ನವರು ಮಾಡುವುದು. ನಮಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎ. ಮುನಿಯಪ್ಪ.—ಮೈಸೂರು ದೇಶದಲ್ಲಿ ಯಾರು ಐ.ಎ.ಎಸ್. ಹಾಗೂ ಐ.ಪಿ.ಎಸ್. ಪರೀಕ್ಷೆಗಳಿಗೆ ಕೂರುತ್ತಾರೋ ಅವರ ರಾಜ್ಯ ಮಟ್ಟದ ಪಟ್ಟಿಯನ್ನು ಏನಾದರೂ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಕೇಂದ್ರ ಸರಕಾರದವರು ಸೆಲೆಕ್ಷನ್ ಕಮಿಟಿ ಮಾಡುತ್ತಾರೆ. ಅವರೇ ಇಲ್ಲಿಗೆ ಬಂದು ನಮ್ಮ ರಾಜ್ಯದಲ್ಲಿರುವ ಒಬ್ಬರು ಅಧಿಕಾರಿಗಳ ಜೊತೆಯಲ್ಲಿ ರಾಜ್ಯ ಮಟ್ಟದವರ ಒಂದು ಪಟ್ಟಿಯನ್ನು ಮಾಡುತ್ತಾರೆ. ಅದರಂತೆ ಎಲ್ಲ ರಾಜ್ಯಗಳಿಗೂ ಹಂಚುತ್ತಾರೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ನಮ್ಮ ಸರಕಾರದಲ್ಲಿರುವ ಅಧಿಕಾರಿಗಳು ಐ.ಎ.ಎಸ್. ಹಾಗೂ ಐ.ಪಿ.ಎಸ್. ಪರೀಕ್ಷೆಗೆ ಕುಳಿತುಕೊಳ್ಳಲು ರಾಜ್ಯ ಸರಕಾರದಿಂದ ಪರವಾಗಿ ತೆಗೆದುಕೊಂಡು ಕೂರುತ್ತಾರೋ ಹೇಗೆ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಎರಡು ತರಹ ರೆಕ್ರೂಟ್‌ಮೆಂಟ್ ಇದೆ. ಒಂದು ಡೈರೆಕ್ಟ್ ರೆಕ್ರೂಟ್‌ಮೆಂಟ್, ಇನ್ನೊಂದು ಪ್ರಮೋಷನಲ್ ಕೋಟಾ ಇದೆ. ಇದರಂತೆ ಯು.ಪಿ.ಎಸ್.ಸಿ. ಕಮಿಟಿಯಲ್ಲಿ ಒಂದು ಸೆಲೆಕ್ಷನ್ ಕಮಿಟಿ ಇರುತ್ತೆ, ಅವರ ಪ್ರಕಾರ ಅವರು ಸೆಲೆಕ್ಟ್ ಮಾಡುತ್ತಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮೈಸೂರು ಸರಕಾರದವರು ಹಿಂದೆ ನಿಮ್ಮ ವರ್ಗದವರಿಗೆ ಐ.ಎ.ಎಸ್. ಹಾಗೂ ಐ.ಪಿ.ಎಸ್. ತರಗತಿಗಳಲ್ಲಿ ತರಬೇತಿ ಕೊಡಲು ಒಂದು ಕೇಂದ್ರ ತೆರೆದಿದ್ದರೂ ಅದನ್ನು ಈಚೆಗೆ ರದ್ದು ಮಾಡಿದ್ದಾರೆ. ಇದನ್ನು ಪುನಃ ತೆರೆಯಲು ಯೋಚನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ವಿವರಗಳನ್ನು ಕೊಡಬಹುದು. ಈಗ ನನ್ನಲ್ಲಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಮೃತಪಟ್ಟಂತರ ಹೊಂದಿದವರಿಗೂ ಇಂತಹ ಸವಲತ್ತುಗಳನ್ನು ಸರಕಾರ ಕೊಡುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನೆಲ್ಲಾ ಯು. ಪಿ. ಎಸ್. ಸಿ. ಮಾಡುವುದು. ಅವರ ನಿಯಮದ ಪ್ರಕಾರ ರೆಕ್ರೂಟುಮೆಂಟು ಮಾಡುತ್ತಾರೆ. ಪ್ರತಿಯೊಂದು ರಾಜ್ಯಕ್ಕೂ ಎಷ್ಟು ವೇಕೆನ್ಸಿಗಳಿವೆ ಅದನ್ನು ನೋಡಿಕೊಂಡು ಎಲ್ಲ ರಾಜ್ಯಗಳಿಗೂ ಹಂಚುವ ಏರ್ಪಾಡು ಇಟ್ಟು ಕೊಂಡಿದ್ದಾರೆ,

ಶ್ರೀ ವಿ. ಎನ್. ಪಾಟೀಲ್.—ಕಾನ್‌ಫಿಡೆನ್‌ಷಿಯಲ್ ರಿಪೋರ್ಟುಗಳ ಮೇಲೆ ರೆಕ್ರೂಟುಮೆಂಟು ಮಾಡುವಾಗ ಪೋಲಿಟಿಕಲ್ ಕನ್‌ಸಿಡರೇಷನ್‌ಗಳೂ ಇರುತ್ತದಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಕಾನ್‌ಫಿಯಲ್ ರಿಪೋರ್ಟು ನೋಡಬೇಕಾಗಿರುವುದು ಪ್ರಮೋಷನಲ್ ರೆಕ್ರೂಟುಮೆಂಟು ಮಾಡುವಾಗ. ಡೈರೆಕ್ಟ್ ರೆಕ್ರೂಟುಮೆಂಟಿನಲ್ಲಿ ಇವು ಯಾವುವೂ ಬರುವುದಿಲ್ಲ. ಎಲ್ಲವನ್ನೂ ಕೇಂದ್ರ ಸರಕಾರದ ಸೆಲೆಕ್ಷನ್ ಕಮಿಟಿಯವರೇ ಮಾಡಿಕೊಳ್ಳುತ್ತಾರೆ. ಡೈರೆಕ್ಟ್ ರೆಕ್ರೂಟುಮೆಂಟಿಗೂ ಕಾನ್‌ಫಿಡೆನ್‌ಷಿಯಲ್ ರೆಕಾರ್ಡುಗಳಿಗೂ ಯಾವ ಸಂಬಂಧವೂ ಇಲ್ಲ.

2-00 P.M.

ಶ್ರೀ ಬಾಪುಗೌಡ.—ಮುಖ್ಯಮಂತ್ರಿಗಳು ಐ.ಎ.ಎಸ್., ಐ.ಪಿ.ಎಸ್. ನವರನ್ನು ನೇರವಾಗಿ ರೆಕ್ರೂಟ್‌ಮೆಂಟ್ ಮಾಡುತ್ತಾರೆ ಎಂದು ಹೇಳಿದರು. ಹಾಗಾದರೆ ರಾಜ್ಯಮಟ್ಟದಲ್ಲಿ ಮೈಸೂರು ಸರ್ಕಾರದವರು ಈ ವರ್ಷ ಎಷ್ಟು ಜನರನ್ನು ಸೆಲೆಕ್ಟ್ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದಂತೆ ಅವರನ್ನು ಮೈಸೂರು ಸರ್ಕಾರದವರು ಸಲೆಕ್ಟ್ ಮಾಡುವ ಹಾಗಿಲ್ಲ. ಅದು ಯು.ಪಿ.ಎಸ್.ಸಿ. ಸಲೆಕ್ಷನ್.